# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 07-09-2018ರ ಶುಕ್ರವಾರದಂದು ಮಧ್ಯಾಹ್ನ 12.00 ಗಂಟೆಗೆ ಜರುಗಿದ ಸಿಂಡಿಕೇಟಿನ ವಿಶೇಷ ಸಭೆಯ ನಡೆವಳಿಗಳು.

**ಹಾಜರಿದ್ದ ಸದಸ್ಯರು:**

1. ಪ್ರೊ. ಟಿ.ಕೆ.ಉಮೇಶ – ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು
2. ಕು. ಸಹನಾ ಶಿವಪ್ಪ – ಸದಸ್ಯರು
3. ಪ್ರೊ. ಎಸ್.ಎಲ್.ಸುರೇಶ್ – ಸದಸ್ಯರು
4. ಡಾ. ರಾಜಗೋಪಾಲ್ – ಸದಸ್ಯರು
5. ಡಾ. ಎ.ಟಿ.ಶಿವರಾಮು – ಸದಸ್ಯರು
6. ಡಾ. ಎಂ.ಪ್ರೀತಿ – ಸದಸ್ಯರು
7. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ – ಸದಸ್ಯರು
8. ಪ್ರೊ. ಜೆ. ಸೋಮಶೇಖರ್ ಕುಲಸಚಿವ(ಪರೀಕ್ಷಾಂಗ) – ಸದಸ್ಯರು
9. ಪ್ರೊ.ಆರ್.ರಾಜಣ್ಣ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರಾದ ಪ್ರೊ.ರಾಜಣ್ಣನವರು ಎಲ್ಲಾ ಸಿಂಡಿಕೇಟ್ ಸದಸ್ಯರನ್ನು ಆತ್ಮೀಯವಾಗಿ ಸಭೆಗೆ ಸ್ವಾಗತಿಸಿ, ಈ ದಿನದ ಸಿಂಡಿಕೇಟ್‌ನ ವಿಶೇಷ ಸಭೆಯನ್ನು, ಖಾಲಿಯಿರುವ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳ ಹುದ್ದೆಯ ಆಯ್ಕೆಗಾಗಿ ಶೋಧನಾ ಸಮಿತಿಗೆ ಸಿಂಡಿಕೇಟ್‌ನಿಂದ ಒಬ್ಬರನ್ನು ನಾಮನಿರ್ದೇಶನ ಮಾಡುವ ಸಲುವಾಗಿ, ಕರೆಯಲಾಗಿದೆ. ತಾವು ಸಹ ಸದರಿ ಕುಲಪತಿ ಹುದ್ದೆಯ ಆಕಾಂಕ್ಷಿಯಾಗಿದ್ದು, ಅರ್ಜಿ ಸಲ್ಲಿಸಿರುವುದರಿಂದ ತಜ್ಞರೊಬ್ಬರನ್ನು ನಾಮನಿರ್ದೇಶಿಸುವ ವಿಷಯದ ಚರ್ಚೆಯಲ್ಲಿ ತಾವು ಪಾಲ್ಗೊಳ್ಳಲು ಬಯಸುವುದಿಲ್ಲವೆಂದು ತಿಳಿಸಿ ಈ ಸಂಬಂಧ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳ ಗಮನಕ್ಕೆ ತಂದು ಸಿಂಡಿಕೇಟ್‌ನ ಅನುಮತಿಯೊಂದಿಗೆ ಸಭೆಯಿಂದ ನಿರ್ಗಮಿಸಿದರು.

ಆನಂತರ ಮಾನ್ಯ ಕುಲಪತಿಗಳಾದ ಪ್ರೊ.ಟಿ.ಕೆ.ಉಮೇಶ್ ಅವರು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ 01-09-2018ರಂದು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದು ಶೋಧನಾ ಸಮಿತಿಯನ್ನು ಪುನರ್ ರಚಿಸುತ್ತಿರುವ ಹಿನ್ನೆಲೆಯಲ್ಲಿ, ಶೋಧನಾ ಸಮಿತಿಗೆ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪ್ರತಿನಿಧಿಯನ್ನು ಮತ್ತೊಮ್ಮೆ ನಾಮನಿರ್ದೇಶನಗೊಳಿಸಲು ಕ್ರಮವಹಿಸುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಈ ದಿನದ ವಿಶೇಷ ಸಭೆಯನ್ನು ಏರ್ಪಡಿಸಲಾಗಿದೆಯೆಂದು ತಿಳಿಸಿದರು.

ಮುಂದುವರೆದು, ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಶೋಧನಾ ಸಮಿತಿಗೆ ಈ ಹಿಂದೆ ನಡೆದ ಇದೇ ಸಿಂಡಿಕೇಟ್ ಸಭೆಯು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ Former Chairman ಪ್ರೊ. ಹರಿಗೌತಮ್ ಅವರನ್ನು ಸಿಂಡಿಕೇಟ್ ನಾಮನಿರ್ದೇಶಿಸಿತ್ತು. ಕಾರಣಾಂತರಗಳಿಂದ ಅವರು ಬೆಂಗಳೂರಿಗೆ ಬಂದು ಸಭೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ಸರ್ಕಾರಕ್ಕೆ ಪತ್ರ ಮುಖೇನ ತಿಳಿಸಿದ್ದರಿಂದ ಸೂಕ್ತರಾದವರೊಬ್ಬರ ಹೆಸರನ್ನು ಕಳುಹಿಸಿಕೊಡುವಂತೆ ಸರ್ಕಾರ ನಿರ್ದೇಶಿಸಿದ ಮೇರೆಗೆ ಮತ್ತೊಮ್ಮೆ ಸಿಂಡಿಕೇಟ್ ಸಭೆ ಸೇರಿ ಇವರ ಬದಲಿಗೆ ಪ್ರೊ. ಕುಟಿನ್ಹೋ ಅವರನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಪ್ರತಿನಿಧಿಯಾಗಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿತ್ತು. ಆದರೆ ಸರ್ಕಾರದ ನಿರ್ದೇಶನದಂತೆ ಪುನರ್‌ರಚಿಸುತ್ತಿರುವ ಶೋಧನಾ ಸಮಿತಿಗೆ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್, ಶಿಕ್ಷಣ ಕ್ಷೇತ್ರದಲ್ಲಿ ಅನುಭವವಿರುವವರ ಹೆಸರನ್ನು ಮುಕ್ತವಾಗಿ ಚರ್ಚಿಸಿ ಒಮ್ಮತದಿಂದ ನಾಮನಿರ್ದೇಶಿಸಬಹುದಾಗಿದೆಯೆಂದರು ಮತ್ತು ಕುಲಸಚಿವರ ಬದಲಿಗೆ ಇಂದಿನ ವಿಶೇಷ ಸಭೆಯನ್ನು ಪ್ರೊ.ಜೆ.ಸೋಮಶೇಖರ್, ಕುಲಸಚಿವ (ಪರೀಕ್ಷಾಂಗ) ಅವರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆಂದರು.

ಸುದೀರ್ಘ ಚರ್ಚೆಯ ನಂತರ ಒಮ್ಮತದಿಂದ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಪ್ರತಿನಿಧಿಯಾಗಿ ಕುಲಪತಿಗಳ ನೇಮಕಾತಿ ಸಂಬಂಧದ ಶೋಧನಾ ಸಮಿತಿಯ ಸದಸ್ಯರನ್ನಾಗಿ ಶಿಕ್ಷಣ ತಜ್ಞರನ್ನು ನಾಮನಿರ್ದೇಶಿಸಲು ಈ ಕೆಳಗಿನಂತೆ ಸಿಂಡಿಕೇಟ್ ತೀರ್ಮಾನಿಸಿತು.

| ವಿಷಯಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **Spl.Syn2017/5.1** | ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಶೋಧನಾ ಸಮಿತಿರಚಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳ ನೇಮಕಾತಿಗೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ದ ಪ್ರಕರಣ 14(2)ರಡಿಯಲ್ಲಿ ಹಾಗೂ ಸರ್ಕಾರದ ಪತ್ರ ಸಂಖ್ಯೆ ಇಡಿ 82 ಯುಎಂವಿ 2018, ದಿನಾಂಕ 01-09-2018ರಂತೆ ಶೋಧನಾ ಸಮಿತಿಗೆ Dr. Chandrashekar.S, Director, CSIR-Indian Institute of Chemical Technology, Government of India, Tarnaka, Hyderabad – 500 007, Telangana, India ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಪ್ರತಿನಿಧಿಯಾಗಿ ಶೋಧನಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಲು ಸರ್ವಾನುಮತದಿಂದ ನಾಮನಿರ್ದೇಶಿಸಲು ಸಿಂಡಿಕೇಟ್ ತೀರ್ಮಾನಿಸಿತು. |

ಕೊನೆಯಲ್ಲಿ ಇಂದಿನ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
**ಕುಲಸಚಿವ(ಪರೀಕ್ಷಾಂಗ) ಮತ್ತು ಸದಸ್ಯ ಕಾರ್ಯದರ್ಶಿ**

ಸಹಿ/-
**ಕುಲಪತಿ ಮತ್ತು ಅಧ್ಯಕ್ಷರು**